

# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: **ಸ್ವಾಮಿ ಶ್ರದ್ಧಾನಂದ**

ಅನುವಾದ: **ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೩೯

ಎಷ್ಟೆಷ್ಟೋ ಜನ ಏನೇನೋ ಮತಲಬುಗಳನ್ನಿಟ್ಟುಕೊಂಡು ಸಾಧು ದರ್ಶನಕ್ಕೆಂದು ಬರುವುದುಂಟು! ಒಂದು ದಿನ ಅಪರಿಚಿತ ವ್ಯಕ್ತಿಯೊಬ್ಬ ಮಹಾರಾಜರ ದರ್ಶನಕ್ಕೆಂದು ಅವರ ಕೊಠಡಿಗೆ ನುಗ್ಗಿದ. ಭಕ್ತಿಭಾವದಿಂದ ವಿರಜಾನಂದರಿಗೆ ನಮಸ್ಕರಿಸಿ ಅವರ ಪದತಲದಲ್ಲಿ ಮಂಡಿಯೂರಿ ಕುಳಿತ.

'ನನ್ನದೊಂದು ಮಾತಿದೆ.'

'ಹೇಳಿ.'

'ನೋಡಿ, ನಾನೊಬ್ಬ ಸಿ.ಐ.ಡಿ. ಭಾರತದ ಪರಾಧೀನತೆಯು ನನ್ನನ್ನು ಬಾಧಿಸುತ್ತಿದೆ. ನಾನು ಪ್ರಾಚೀನ ಯುದ್ಧ ವಿದ್ಯೆಯನ್ನು ಕರಗತ ಮಾಡಿಕೊಂಡು ಇಂಗ್ಲಿಷರೊಂದಿಗೆ ಯುದ್ಧ ಮಾಡುವೆ.'

'ಹೇಗೆ ಕರಗತಮಾಡಿಕೊಳ್ಳುವಿರಿ?'

'ಚಿರಂಜೀವಿಯಾದ ಅಶ್ವತ್ಥಾಮರ ಶಿಷ್ಯತ್ವ ಪಡೆದು.'

'ಅಶ್ವತ್ಥಾಮ!?'

'ಹ್ಞಾ! ಅಶ್ವತ್ಥಾಮ. ದ್ರೋಣಪುತ್ರ ಅಶ್ವತ್ಥಾಮ. ಅವರಿಗೆ ಅಮರತ್ವದ ವರವಿತ್ತು. ಖಂಡಿತವಾಗಿಯೂ ಅವರು ಜೀವಿಸಿರುವರು. ಭಾರತದ ಯಾವುದಾದರೊಂದು ಗಿರಿ-ಪರ್ವತಗಳಲ್ಲಿ ಧ್ಯಾನಮಗ್ನರಾಗಿರಬಹುದು. ನೀವು ಸಾಧು ಮಹಾಪುರುಷರು. ಅವರನ್ನು ಎಲ್ಲಿ ಕಾಣಬಹುದೆಂದು ಖಂಡಿತವಾಗಿ ನಿಮಗೆ ತಿಳಿದಿರುತ್ತದೆ. ದಯವಿಟ್ಟು ಹೇಳಿ.'

ವಿರಜಾನಂದರು ದಂಗಾದರು. ಏನು ತಾನೇ ಹೇಳುತ್ತಾರೆ? ಏನೋ ಕೆಲವು ಸಿಹಿ ಮಾತುಗಳನ್ನಾಡಿ ನುಣುಚಿಕೊಂಡರು.

ಬೇಸಿಗೆ ಪ್ರಾರಂಭವಾಗಿದೆ, ಡಾ. ಇಂದು ಬಾಬುಗಳು ಮಹಾರಾಜರಿಗೆ ಶ್ಯಾಮಲಾತಾಲ್‌ಗೆ ಹೋಗಲು ಅನುಮತಿಯಿತ್ತಿದ್ದಾರೆ. ಅಲ್ಲಿಗೆ ಹೋಗುವ ಮುನ್ನ ಒಂದು ಸಂಜೆ ಮಹಾರಾಜರು ಕೆಲವು ಭಕ್ತರೊಂದಿಗೆ ಮಂದಿರದಲ್ಲಿ ಕೀರ್ತನೆಯನ್ನು ನಡೆಸಿದರು. ಶ್ರೀ ನವದ್ವೀಪಚಂದ್ರ ವ್ರಜವಾಸಿ ಎಂಬುವರು ಅವರೊಂದಿಗೆ ಖೋಲ್ ವಾದ್ಯವನ್ನು ನುಡಿಸಿದರು. ಕೊಲ್ಕತ್ತೆಯಲ್ಲಿ ಡಾ. ಇಂದುಬಾಬುವು ಉನ್ನತಮಟ್ಟದ ಸಂಕೀರ್ತನೆ ಮಾಡುವ ನಿಪುಣ ಗಾಯಕ ಮತ್ತು ಶಿಕ್ಷಕರೆಂದು ಪ್ರಸಿದ್ಧರು. ವಿರಜಾನಂದರು ಮತ್ತು ಮಠದವರೆಲ್ಲ ಅಂದು ಅವರ ಭಜನೆಯನ್ನು ಕೇಳಿ ತುಂಬ ಸಂತೋಷಗೊಂಡರು.

೧೯೪೧ರ ಮೇ ೧೨ರಂದು ವಿರಜಾನಂದರು ಶ್ಯಾಮಲಾತಾಲ್ ತಲುಪಿದರು. ಮಾರ್ಗದ ಕಾಶಿಯಲ್ಲಿ ಒಂದೂವರೆ ದಿನ ತಂಗಿದ್ದರು. ಬಹಳ ಸೆಖೆಯಾದ್ದರಿಂದ ಸೇವಾಶ್ರಮದಲ್ಲಿ ಅಂದಿನ ರಾತ್ರಿ ಮಹಾರಾಜರು ಅಂಗಳದಲ್ಲಿ ಮಂಚವನ್ನು ಹಾಕಿ, ತೆರೆದ ಆಕಾಶದಡಿ ಮಲಗಬೇಕಾಯಿತು. ಕಾಶಿಯ ಎರಡೂ ಆಶ್ರಮಗಳ ನಿವಾಸಿಗಳೂ ಭಕ್ತರೂ ಸ್ವಲ್ಪ ಸಮಯಕ್ಕಾಗಿಯಾದರೂ ಸಹ ಮಹಾರಾಜರ ದರ್ಶನ ಪಡೆದು ಆನಂದ ಮತ್ತು ಆಧ್ಯಾತ್ಮಿಕ ಪ್ರೇರಣೆಯನ್ನು ಪಡೆದರು.

ಶ್ಯಾಮಲಾತಾಲ್‌ನಲ್ಲಿ ಮಹಾರಾಜರು ಇಳಿದುಕೊಳ್ಳುತ್ತಿದ್ದ ಕೊಠಡಿಯನ್ನು ಹಿಂದಿನ ಚಳಿಗಾಲದಲ್ಲಿ ದುರಸ್ತಿ ಮಾಡಿಸಿ, ಕೆಲವು ಬದಲಾವಣೆಗಳನ್ನು ಮಾಡಿಸಲಾಗಿತ್ತು. ಮಹಾರಾಜರು ಅಸ್ವಸ್ಥರಿದ್ದಾಗ್ಯೂ ಸ್ವಲ್ಪ ಆರಾಮವಾಗಿರಲೆಂದು ಸಾಮಾನ್ಯವಾಗಿ ಈ ತರಹದ ಕೆಲಸಗಳನ್ನು ಚಳಿಗಾಲದಲ್ಲಿಯೇ ಮಾಡಿಸಿಕೊಳ್ಳಬೇಕು. ಮನೆಕಟ್ಟುವ ಮೇಸ್ತ್ರಿ, ಕೆಲಸದಾಳುಗಳು ಶ್ಯಾಮಲಾತಾಲ್‌ನಲ್ಲಿ ಸಿಗುವುದಿಲ್ಲ , ಮಾಯಾವತಿ ಕಡೆಯಿಂದ ಕರೆದುಕೊಂಡು ಬರಬೇಕಾಗುತ್ತದೆ. ಚಳಿಗಾಲವಲ್ಲದಿದ್ದರೆ ಅವರೂ ಸಹ ಬರಲಾಗುವುದಿಲ್ಲ. ಏಕೆಂದರೆ ಚಳಿಯಲ್ಲಿ ಹೊಲದ ಕೆಲಸಗಳಿರುವುದಿಲ್ಲ. ಶರತ್ಕಾಲದಲ್ಲಿ ಗೋಧಿ ಬಿತ್ತನೆ ಮುಗಿದಿರುತ್ತದೆ. ಚಳಿಯಲ್ಲಿ ಅವರೆಲ್ಲರೂ ಕೆಳಗಿನ ಪ್ರದೇಶಗಳಿಗೆ ಇಳಿದುಬರುತ್ತಾರೆ; ತಮಗೆ ಸಾಧ್ಯವಾಗುವ ಕೆಲಸಕಾರ್ಯ ಮಾಡಿ ಸ್ವಲ್ಪ ಹಣ ಸಂಪಾದಿಸಿ ಹಿಂದಿರುಗುತ್ತಾರೆ. ಶ್ಯಾಮಲಾತಾಲ್‌ನಲ್ಲಿ ಕಟ್ಟಡ ಕೆಲಸ ನಡೆಯುವಾಗಲೆಲ್ಲ ಎತ್ತರದ ಸ್ಥಳಗಳಿಂದ ಇಳಿದುಬಂದಿರುವ ಮೇಸ್ತ್ರಿ ಮತ್ತು ಕೆಲಸಗಾರರ ಒಂದು ಸಣ್ಣ ಮೇಳವೇ ನೆರೆದಿರುತ್ತದೆ. ಬರುವವರೆಲ್ಲ ತಮ್ಮೊಂದಿಗೆ ಹೆಂಡತಿ ಮಕ್ಕಳನ್ನೂ, ಹಸು, ಎತ್ತು, ಮೇಕೆ, ಟಗರನ್ನೂ ಕರೆತರುತ್ತಾರೆ. ಹುಲ್ಲಿನ ತಾತ್ಕಾಲಿಕ ಕುಟೀರಗಳಿಂದ ಆಶ್ರಮದ ತಗ್ಗಿನ ಜಮೀನು ತುಂಬಿಹೋಗಿರುತ್ತದೆ. ಪ್ರತಿ ಕುಟೀರದಲ್ಲೂ ರಾತ್ರಿಯಿಡೀ ಸೌದೆಯ ಬೆಂಕಿ ಉರಿಯುತ್ತಿರುತ್ತದೆ.

ಈ ಸಲ ಸ್ನಾನಯಾತ್ರೆಯು ಜೂನ್ ೬ರಂದು ಬಂದಿದೆ. (ವಿರಜಾನಂದರ ಜನ್ಮದಿನ). ಕೊಲ್ಕತ್ತಾ ಹಾಗೂ ಇತರೆಡೆಗಳಿಂದ ಕೆಲವು ಭಕ್ತರು ಮಹಾರಾಜರ ಜನ್ಮದಿನವನ್ನು ಹಿರಿದಾಗಿ ಪಾಲಿಸುವ ಬಯಕೆಯಿಂದ ಅವರ ಅನುಮತಿ ಆಶೀರ್ವಾದಗಳನ್ನು ಕೋರಿ ಪತ್ರ ಬರೆದಿದ್ದರು. ಈ ಪ್ರಸ್ತಾಪವು ಮಹಾರಾಜರಿಗೆ ಇಷ್ಟವಾಗಲಿಲ್ಲ. ಅವರು ''ಹೊರಗೆ ಯಾವ ಆಡಂಬರ

ವನ್ನೂ ತೋರದೆ ಮನೆಯಲ್ಲಿಯೇ ಕುಳಿತು, ಜಪಧ್ಯಾನ ನಡೆಸಿರಿ'' ಎಂದು ಪತ್ರ ಬರೆದರು. ಶ್ಯಾಮಲಾತಾಲ್‌ನಲ್ಲಿ ಮಹಾರಾಜರ ಈ ೬೮ನೇ ಜನ್ಮದಿನವನ್ನು ಆಶ್ರಮವಾಸಿಗಳೆಲ್ಲ ನಿರಾಡಂಬರವಾಗಿ ಆಚರಿಸಿದರು. ಹಿಂದಿನ ಸಲ ಮಹಾರಾಜರು ಬಂದಾಗ ಹೊಸ ವಾರ್ಡಿಗಾಗಿ ಶಂಕುಸ್ಥಾಪನೆ ಮಾಡಿದ್ದರು; ಅದರ ನಿರ್ಮಾಣವು ಈಗ ಸಂಪೂರ್ಣವಾಗಿತ್ತು. ಅದರ ಉದ್ಘಾಟನೆಯ ಶುಭ ಸಂದರ್ಭದಲ್ಲಿ ಪೂಜೆ, ಚಂಡೀಪಾಠಗಳು ಸಂಪನ್ನವಾದವು. ಮುಂದಿನ ವರ್ಷಗಳಲ್ಲಿ ಮಹಾರಾಜರ ಜನ್ಮದಿನಾಚರಣೆಯನ್ನು ಆಶ್ರಮಕ್ಕೇ ಸೀಮಿತಗೊಳಿಸಲಾಗಲಿಲ್ಲ. ಕೊಲ್ಕತ್ತ ಮತ್ತು ಇತರೆಡೆಗಳಿಂದ ಭಕ್ತರು ಬರುತ್ತಿದ್ದರು; ನಾನಾ ವಸ್ತುಗಳನ್ನು ತರುತ್ತಿದ್ದರು. ಏಕೆಂದರೆ ಅಲ್ಲಿ ಸಂತೆಯಾಗಲಿ, ಪೇಟೆಯಾಗಲಿ ಇಲ್ಲ, ಹಣಕೊಟ್ಟರೂ ಯಾವ ಪದಾರ್ಥವೂ ಸಿಗದೆಂದು ಅವರಿಗೆಲ್ಲ ತಿಳಿದಿತ್ತು. ಹಣ್ಣುಸಿಹಿತಿಂಡಿಗಳ ರಾಶಿಯೇ ಬೀಳುತ್ತಿತ್ತು. ಉತ್ಸವದಲ್ಲಿ ಎಷ್ಟು ತಾನೇ ಖರ್ಚಾಗುವುದು? ಬಾಕಿ ವಸ್ತುಗಳನ್ನು ಮಹಾರಾಜರು ತುಂಬ ಜೋಪಾನ ಮಾಡಿ ಅವರ ಊಟದ ಮನೆಯ ಟೇಬಲಿನ ಮೇಲೆ ಪತ್ತಿಗೆಯಲ್ಲಿ (racks) ಬೀರುವಿನಲ್ಲಿ, ಚಿಕ್ಕ ದೊಡ್ಡ ನಾನಾ ಪಾತ್ರೆಗಳಲ್ಲಿ ಜೋಡಿಸಿಡುತ್ತಿದ್ದರು. ಪ್ರತಿದಿನವೂ ಸ್ವಲ್ಪ ಸ್ವಲ್ಪವಾಗಿ ಭಾಗಮಾಡಿ ಆಶ್ರಮದವರಿಗೂ ಭಕ್ತರಿಗೂ ತಾವೇ ಹಂಚುತ್ತಿದ್ದರು. 'ಉತ್ಸವದ ಬಾಕಿ'ಯು ಸುಮಾರು ಒಂದು ತಿಂಗಳ ಕಾಲ ನಡೆಯುತ್ತಿತ್ತು. ಬಂದಿರುತ್ತಿದ್ದ ಭಕ್ತರು ಹತ್ತು ಹನ್ನೆರಡು ದಿನಗಳಿದ್ದು ಹೊರಡುತ್ತಿದ್ದರು. ಶ್ರೀಗುರುವಿನ ಸಾನ್ನಿಧ್ಯ ಇಲ್ಲಿ ಸಿಕ್ಕುವಂತೆ ಬೇಲೂರು ಮಠದಲ್ಲಿ ಸಿಗುತ್ತಿರಲಿಲ್ಲ. ದಿನವೂ ಎರಡು ಬಾರಿ ಪ್ರಣಾಮ ಮಾಡುವುದು, ಅವರ ಹತ್ತಿರ ಕುಳಿತು ತಮ್ಮ ಆಧ್ಯಾತ್ಮಿಕ ಜೀವನದ ಸಮಸ್ಯೆಗಳನ್ನು ನಿಸ್ಸಂಕೋಚವಾಗಿ ಹೇಳಿಕೊಂಡು, ಅದಕ್ಕೆ ಪರಿಹಾರ ಪಡೆಯುವುದು, ಮಹಾರಾಜರು ಬೆಳಗು ಬೈಗುಗಳಲ್ಲಿ ಅಡ್ಡಾಡುವಾಗ ತಾವೂ ಅವರೊಂದಿಗೆ ಹೋಗುವುದು, ಯಾವಾಗಲಾದರೊಮ್ಮೆ ಅವರ ಸೇವೆಯನ್ನು ಕಿಂಚಿತ್ ಮಾಡುವುದು, ಮಹಾರಾಜರ ದೇವರ ಮನೆಯನ್ನು ಅಥವಾ ಅವರ ಕೊಠಡಿಯನ್ನು ಹೂದಾನಿಗಳಿಂದ ಅಲಂಕರಿಸುವುದು, ಹೂವಿನ ಮಾಲೆಗಳನ್ನು ಮಾಡಿ ದೇವರ ಪಟವನ್ನಲಂಕರಿಸುವುದು, ವಿಶೇಷ ದಿನಗಳಲ್ಲಿ ಮಹಾರಾಜರು ಎಲ್ಲರೊಡಗೂಡಿ ಮುಖ್ಯ ಕಟ್ಟಡದಲ್ಲಿ ಊಟ ಮಾಡುವಾಗ ಆ 'ಎಲ್ಲರೊಡನೆ' ತಾವೂ ಒಬ್ಬರಾಗಿರುವುದು — ಇವೆಲ್ಲವೂ ದುರ್ಲಭವಾದ ಸೌಭಾಗ್ಯವಲ್ಲದೆ ಮತ್ತಿನ್ನೇನು? ಯಾರಿಂದ ಭಗವಂತನನ್ನು ಉಪಾಸಿಸುವ ಮಾರ್ಗದರ್ಶನ ಮತ್ತು ಪ್ರೇರಣೆಯನ್ನು ಪಡೆದಿರುವೆವೋ ಅವರಿಗೆ ನಮ್ಮೆಲ್ಲ ಪ್ರೀತಿಯನ್ನು ವಿನಿಯೋಗಿಸಿದರೆ 'ಪ್ರೀತಿ' ಎಂಬುದೇ ಸಾರ್ಥಕವಾದಂತೆ ಅಲ್ಲವೆ?

ಅಪೂರ್ವಾನಂದರು ಈ ಬಾರಿ (೧೯೪೧) ಅಮರನಾಥನ ದರ್ಶನಕ್ಕೆಂದು ಕಾಶ್ಮೀರಕ್ಕೆ ಹೋಗುವ ಸಂಕಲ್ಪ ಮಾಡಿದ್ದಾರೆ; ವಿರಜಾನಂದರ ಜನ್ಮದಿನ ಆಚರಣೆಯ ಕೆಲದಿನಗಳ ನಂತರ ಹೊರಟುನಿಂತಿದ್ದಾರೆ. ಆಶ್ರಮದ ಕೆಲಸಕಾರ್ಯಗಳನ್ನು ನೋಡಿಕೊಳ್ಳಲು ಅವರ ಸ್ಥಾನಕ್ಕೆ ಯುವ ಸಂನ್ಯಾಸಿಯೊಬ್ಬರನ್ನೂ ಮಹಾರಾಜರು ಮಠದಿಂದ ಕರೆತಂದಿದ್ದಾರೆ. ಈ ಸಂನ್ಯಾಸಿಯು ತುಂಬ ಮಡಿವಂತಿಕೆಯವರೂ, ಸ್ವಲ್ಪ ಕಿರಿಕಿರಿ ಸ್ವಭಾವದವರೂ, ಕಿಂಚಿತ್ ಒರಟು ಪ್ರಕೃತಿಯವರೂ, ತುಂಬ ಸರಳರೂ, ಸೇವಾಪರಾಯಣರೂ ಆಗಿದ್ದರು. ಮಹಾರಾಜರೇ ಅವರಿಗೆ ಕೈ ಹಿಡಿದು ಎಲ್ಲ ಕೆಲಸ ಕಲಿಸುತ್ತಿದ್ದಾರೆ. ಈ ಸಾಧುಗಳು ತುಂಬ ಚಿಕ್ಕ ವಯಸ್ಸಿನಲ್ಲಿಯೇ ಮಠವನ್ನು ಸೇರಿದ್ದು, ಮಹಾಪುರುಷ ಮಹಾರಾಜರ ಪ್ರೀತ್ಯಾದರಗಳನ್ನು ಗಳಿಸಿದ್ದರು. ವಿರಜಾನಂದರು ಸೆಕ್ರೆಟರಿಗಳಾಗಿದ್ದಾಗಿನಿಂದಲೂ ಇವರನ್ನು ತುಂಬ ಸ್ನೇಹದಿಂದ ಕಾಣುತ್ತ ಬಂದಿದ್ದಾರೆ. ಆ ಸಾಧುವು ಶ್ಯಾಮಲಾತಾಲ್‌ಗೆ ಹೋಗಲು ತುಂಬ ಉತ್ಸುಕರಾಗಿದ್ದುದನ್ನು ಕಂಡು ವಿರಜಾನಂದರು ಮಠದಲ್ಲೊಮ್ಮೆ ಅವರನ್ನು ಕೇಳಿದ್ದರು —

'ಏನಪ್ಪ, ನಿನಗಾಗುತ್ತೆ ತಾನೇ ಶಂಕರನ (ಅಪೂರ್ವಾನಂದರ) ಎಲ್ಲ ಕೆಲಸ ನಿಭಾಯಿಸಲು?'

'ಖಂಡಿತ.'

'ಪರ್ವತ ಪ್ರದೇಶಗಳಲ್ಲಿ ಕೆಲಸದವರನ್ನು ನಿಭಾಯಿಸೋದು ತುಂಬ ಕಷ್ಟ.'

'ಓಹ್! ನನಗದರ ಚಿಂತೆಯಿಲ್ಲ. ಎಲ್ಲರನ್ನೂ ಒದ್ದು ಸರಿ ಮಾಡ್ತೀನಿ.'

'(ವಿರಜಾನಂದರು ನಕ್ಕು) ಇಲ್ವೋ ಅಪ್ಪ, ನಿನ್ನ ಒದೆತ ಅಲ್ಲಿ ನಡೆಯೋಲ್ಲ. ತಲೆ ಬಿಸಿಮಾಡಿಕೊಂಡರೆ ಅವರು ಕೆಲಸಕ್ಕೆ ಬರುವುದಿಲ್ಲ. ಆಗ ಭಾರಿ ಕಷ್ಟ ನೋಡು.'

'ಕಷ್ಟವೇನು? ನಾನೇ ಎಲ್ಲ ಮಾಡಿಕೊಂಡು ಹೋಗ್ಲಿಕ್ಕಾಗೋದಿಲ್ವೇನು? ಅಡಿಗೆ, ತೋಟ, ಗೋಶಾಲೆ ಎಲ್ಲ ಕೆಲಸ ನಾನೇ ಮಾಡಬಲ್ಲೆ.'

'ನಿನ್ನ ಮಡಿವಂತಿಕೆ? ಪಹಾಡಿಗಳೆಲ್ಲ ತುಂಬ ಕೊಳಕು ನೋಡು.'

'ಆದ್ರೆ ತಾನೆ ಏನು? ಠಾಕೂರರೇ ಹೇಳಿಲ್ವೆ 'ಎಲ್ಲಿ ಹೇಗೋ ಅಲ್ಲಿ ಹಾಗೆ' ನಾನು ಎಲ್ಲ ಸ್ಥಳದಲ್ಲೂ ಇರಬಲ್ಲೆ.'

'(ವಿರಜಾನಂದರು ನಕ್ಕು) ಭೇಷ್! ನಡಿ ಹಾಗಾದ್ರೆ ಶ್ಯಾಮಲಾತಾಲ್‌ಗೆ. '

ಇಲ್ಲಿ ಕೆಲಸಕ್ಕಿಳಿದ ಆ ಸಾಧುವಿಗೆ ತಮ್ಮ ಮಾತನ್ನು ಉಳಿಸಿಕೊಳ್ಳಲಾಗಲಿಲ್ಲ. ಮಾಲಿ ಹಾಗೂ ಕೆಲಸದವರೊಡನೆ ಘರ್ಷಣೆ ನಡೆಯುತ್ತಲೇ ಇತ್ತು. ಒಂದು ದಿನ ಎಲ್ಲರೂ ಸೇರಿ ಮುಷ್ಕರ ಹೂಡಿ ಕುಳಿತರು. ಆಶ್ರಮದ ಕೆಲಸ ಸ್ಥಗಿತಗೊಂಡಿತು. ಕೊನೆಗೆ ಸ್ವತಃ ವಿರಜಾನಂದರೇ ಬಂದು ಫೈಸಲು ಮಾಡಬೇಕಾಗಿ ಬಂತು. ಮತ್ತೊಂದು ದಿನ ನೋಡುತ್ತಾರೆ, ಕೆನೆ ಸಂಗ್ರಹಿಸಿ ಅದರಿಂದ ಬೆಣ್ಣೆ ತೆಗೆಯುವ ಕೆಲಸವನ್ನು ಸಾಧು ಮಾಡಿಲ್ಲ. ವಿರಜಾನಂದ

ರೇನೂ ಹೇಳಲಿಲ್ಲ, ಮಾರನೇ ದಿನದಿಂದ ಬೇಜಾರು ಹುಟ್ಟಿಸುವ ಕೆಲಸವನ್ನು ಅರ್ಧ ಗಂಟೆಯ ಹೊತ್ತು ಮಾಡತೊಡಗಿದರು. 'ಬೇಜಾರು' ಎಂಬುದು ಪುಣ್ಯಾತ್ಮಳಾದ ಗೋಪಾಲೇರ್ ಮಾಳ ಆಶೀರ್ವಾದದಿಂದ ಅವರ ಮನಸ್ಸಿನಿಂದ ಅಳಿಸಿಯೇ ಹೋಗಿತ್ತು. ಏಕೆಂದರೆ ಸಂನ್ಯಾಸದ ನಂತರ 'ವಿರಜಾನಂದ'ರೆಂಬ ಇವರ ಹೆಸರು ಕೇಳಿ ಆಕೆ ಹೇಳಿದ್ದರು, 'ಬಿರಜಾನಂದ' ಅಂದರೆ, ಯಾರಿಗೆ ಬೇಜಾರು ಇಲ್ಲವೋ ಅವರು ಎಂದು.

ಮಹಾಯುದ್ಧದ ಪರಿಸ್ಥಿತಿಯು ಕ್ರಮೇಣ ಜಟಿಲವಾಗುತ್ತ ಬರುತ್ತಿತ್ತು. ಜರ್ಮನಿಯು ರಷ್ಯಾದ ಮೇಲೆ ಆಕ್ರಮಣ ಮಾಡಿದೆಯೆಂದು ವಾರ್ತಾಪತ್ರಿಕೆಯಿಂದ ತಿಳಿದುಬಂತು. ಹಿಮಾಲಯದ ಏಕಾಂತದಲ್ಲಿದ್ದರೂ ವಿರಜಾನಂದರು ಪ್ರಪಂಚದ ಘಟನಾವಳಿಗಳ ಸ್ಥಿತಿಗತಿಯನ್ನು ಕೂಲಂಕಷವಾಗಿ ಪರಿಶೀಲಿಸುತ್ತಿದ್ದರು. ತುಂಬ ವಿಶದವಾಗಿ ವಾರ್ತಾಪತ್ರಿಕೆಯನ್ನೋದುವುದು ಅವರ ದಿನಂಪ್ರತಿಯ ಅಭ್ಯಾಸವೇ ಆಗಿತ್ತು. ಯುದ್ಧದ ಪರಿಣಾಮವನ್ನೂ, ಭಾರತದ ಸರ್ವತೋಮುಖ ಒಳಿತನ್ನೂ ತಾವೊಬ್ಬರೇ ಕುಳಿತು ಆಲೋಚಿಸಿ ನಿರ್ಣಯಿಸುವ ಪ್ರಯತ್ನ ಮಾಡುತ್ತಿದ್ದರು.

ಬೇಲೂರು ಮಠದಲ್ಲಿ ಹಿಂದಿನ ವರ್ಷ ಕಾಲೇಜಿನ ಕಟ್ಟಡಕ್ಕೆ ವಿರಜಾನಂದರು ಅಸ್ತಿಭಾರವನ್ನು ಹಾಕಿದ್ದರು. ಅದೀಗ ಸಿದ್ಧವಾಗಿ ನಿಂತಿತ್ತು. ಈ ವರ್ಷ (೧೯೪೧) ಜುಲೈ ೪ರಂದು ಅಲ್ಲಿ ಪಾಠಗಳು ಆರಂಭವಾಗಲಿದ್ದವು. ಇದಕ್ಕಾಗಿ ಮಠಾಧ್ಯಕ್ಷರ ಆಶೀರ್ವಾಣಿಯನ್ನು ಬಯಸಿದ್ದರು. ಅದಕ್ಕಾಗಿ ಮಹಾರಾಜರು ಶ್ಯಾಮಲಾತಾಲ್‌ನಿಂದ ತಂತಿಯೊಂದನ್ನು ಕಳುಹಿಸಿದರು —

*Craving Thakur's and Swamiji's Grace and blessings for its brilliant success. With my prayers —*

Virajananda

(ಕಾಲೇಜಿನ ಸಾಫಲ್ಯಕ್ಕಾಗಿ ಶ್ರೀರಾಮಕೃಷ್ಣರ ಮತ್ತು ವಿವೇಕಾನಂದರ ಕೃಪಾಶೀರ್ವಾದಗಳನ್ನು ಬೇಡುತ್ತ, ಪ್ರಾರ್ಥನೆಗಳೊಂದಿಗೆ — ವಿರಜಾನಂದ).

ಪ್ರತಿಸಲದಂತೆ ಈ ಸಲವೂ ಸ್ವಾಮೀಜಿಯವರ ಮಹಾಸಮಾಧಿಯ ದಿನ, ಜುಲೈ ೪ನ್ನು ಶ್ಯಾಮಲಾತಾಲ್‌ನಲ್ಲಿ ಆಚರಿಸಲಾಯಿತು. ಬೇಲೂರು ಮಠದಲ್ಲಿ ಇದೇ ದಿನ ಪ್ರಾರಂಭವಾದ ವಿದ್ಯಾಮಂದಿರದ ಬಗ್ಗೆ ಮಹಾರಾಜರಿಗೆ ತುಂಬ ಕಾಳಜಿಯಿತ್ತು. ಪ್ರತಿವರ್ಷ ಪರೀಕ್ಷೆಯ ನಂತರ ಅಲ್ಲಿಯ ಅಧ್ಯಕ್ಷ ಮಹಾರಾಜರು ವಿರಜಾನಂದರಿಗೆ ವಿದ್ಯಾರ್ಥಿಗಳ ಫಲಿತಾಂಶವನ್ನು ಟೆಲಿಗ್ರಾಂನ ಮೂಲಕ ತಿಳಿಸುತ್ತಿದ್ದರು; ಆಗ ವಿರಜಾನಂದರು ತುಂಬ ಆನಂದ ವ್ಯಕ್ತಪಡಿಸುತ್ತಿದ್ದರು.

ಮಹಾರಾಜರು ಇಳಿದುಕೊಳ್ಳುತ್ತಿದ್ದ ಬಂಗಲೆ ಸುತ್ತಲೂ ಹೂವಿನ ತೋಟವಿತ್ತು. ಈ ಬಾರಿಯೂ ಮಳೆಗಾಲದಲ್ಲಿ ಮಹಾರಾಜರೇ ಸ್ವತಃ ನಿಂತು ವಿವಿಧ ಗಿಡಗಳನ್ನು ಹಾಕಿಸುತ್ತಿದ್ದಾರೆ. ಬೆಳಗ್ಗೆ ಚಹಾ ಕುಡಿದ ನಂತರ ಕೆಲವು ಸಲಕರಣೆಗಳನ್ನು ಹಿಡಿದು ಗಿಡದ ಆರೈಕೆ ಮಾಡುತ್ತ ಸುಮಾರು ಸಮಯ ಕಳೆಯುತ್ತಿದ್ದರು. ಈ ಬಾರಿ ಹೊಸ ಸೇವಕರೊಬ್ಬರನ್ನು ಮಠದಿಂದ ಕರೆತಂದಿದ್ದಾರೆ. ಆ ಬ್ರಹ್ಮಚಾರಿಯು ಹೃಷ್ಟಪುಷ್ಟನಾಗಿದ್ದು ಬಲಾಢ್ಯನಾಗಿದ್ದ. ಅವನನ್ನು ಮಹಾರಾಜರು ತೋಟದ ಕೆಲಸಕ್ಕೆ ಎಳೆಯುತ್ತಿದ್ದರು. ಬಳ್ಳಿಗಳಿಗೆ ಹಂದರ ಹಾಕಲು ಅಥವಾ ತೋಟಕ್ಕೆ ಬೇಲಿ ಹಾಕಲೋಸುಗ ಆ ಬ್ರಹ್ಮಚಾರಿಯು ಕಾಡಿನಲ್ಲಿ ದೂರದೂರಕ್ಕೆ ಹೋಗಿ ರೆಂಬೆಕೊಂಬೆಗಳನ್ನು ಸಂಗ್ರಹಿಸಿ ಹೆಗಲಮೇಲೆ ಹೊತ್ತು ತರುತ್ತಿದ್ದ. ಇದರಿಂದ ಮಹಾರಾಜರಿಗಂತೂ ತುಂಬ ಖುಷಿ. ''ಇದೇ ತಾನೇ ಬೇಕು. ಈಗಿನ ಕಾಲದ ಸ್ಕೂಲ್-ಕಾಲೇಜಿನಲ್ಲಿ ಕಲಿತ ಹುಡುಗರಂತೂ ತೀರ ಕೈಲಾಗದವರಾಗಿಬಿಟ್ಟಿದ್ದಾರೆ. practical (ಸ್ವತಃ ಕೈಯಿಂದ ಮಾಡುವ) ಆಗಿ ಮಾಡುವ ಯಾವ ಕೆಲಸವೂ ಗೊತ್ತಿಲ್ಲ. ಕಲಿಯಲೂ ಇಚ್ಛೆಯಿಲ್ಲ'' ಎನ್ನುತ್ತಿದ್ದರು.

ವಿಶ್ವಕವಿ ರವೀಂದ್ರನಾಥ ಠಾಕೂರರ ಮೃತ್ಯುವು ಇಡೀ ದೇಶದಲ್ಲಿ ಹೇಗೆ ಶೋಕದ ಛಾಯೆಯನ್ನು ಹರಡಿತ್ತೋ ನಿರ್ಜನವಾದ ಹಿಮಾಲಯದ ಈ ತಪೋವನದಲ್ಲಿಯೂ ಹಾಗೆಯೇ ಮಾಡಿತ್ತು. ಕೆಲವು ದಿನಗಳು ಅವರ ಬಗ್ಗೆ ಚರ್ಚೆ ನಡೆಯಿತು. ದೇಶವಿದೇಶಗಳಲ್ಲಿ ಬಂಗಾಳದ ಸಾಂಸ್ಕೃತಿಕ ಗೌರವವು ಇವರ ಮೂಲಕ ಪ್ರವಹಿಸಿದಂತೆ ಇನ್ನಾರ ಮೂಲಕ ತಾನೇ ನಡೆದಿದೆ? ಮುಂದೊಮ್ಮೆ ಮಹಾರಾಜರು ಡೆಹರಾಡೂನಿನಲ್ಲಿದ್ದಾಗ ರವೀಂದ್ರರ ಕೃತಿಗಳನ್ನು ಧಾರವಾಹಿಯಾಗಿ ಕೆಲವು ದಿನ ಬಿಡದೇ ಓದಿದ್ದರು.

ರಕ್ತಗೆಂಪಿನ ಕಣಿಗಲೆ ಗುಚ್ಛಗಳು ಆಶ್ರಮದ ನಾನಾ ಸ್ಥಳಗಳಲ್ಲಿ ಅರಳಿ ನಿಂತಿವೆ. ಹೇರಳವಾದ ಸುಗಂಧರಾಜ ಮತ್ತು ನಾನಾವಿಧದ ಲಿಲ್ಲಿಗಳಿಂದ ಮಳೆಗಾಲದ ಪುಷ್ಪೋದ್ಯಾನವು ಜಗಮಗಿಸುತ್ತಿದೆ. ಆಗಾಗ ನಿಲ್ಲದ ಮಳೆ. ಪರ್ವತಗಳಿಂದ ಮಳೆಯ ಉನ್ನತ್ತ ಜಲಧಾರೆಗಳು ಸಶಬ್ದವಾಗಿ ಹರಿದು ಕೆಳಗಿನ ಸರೋವರಗಳನ್ನು ತುಂಬುತ್ತಿವೆ. ಕಾಡಿನ ಮಧ್ಯದಲ್ಲಿ ಹುದುಗಿರುವ ಗ್ರೀಷ್ಮದಲ್ಲಿ ಅದೃಶ್ಯವಾಗುವ ಝರಿಗಳು ಈಗ ರಭಸವಾಗಿ ಹರಿಯುವ



ಶ್ಯಾಮಲಾತಾಲ್ ಆಶ್ರಮ


ಶಾರದಾ ನದಿಯ ದೃಶ್ಯ (ಬೆಟ್ಟದ ತುದಿಯಿಂದ)

ನದಿಗಳಂತಾಗಿವೆ. ಹಸಿರೇ ಹಸಿರು. ಸುತ್ತಲೂ ನಯನಮನೋಹರ ವನಶ್ರೀ. ಪರ್ವತಗಳ ನಡುವೆ ಚಿತ್ರವಿಚಿತ್ರ ಆಕಾರದ ಶುಭ್ರ ಮೇಘಗಳು ತೇಲಾಡುತ್ತಿವೆ. ಶ್ಯಾಮಲಾತಾಲ್‌ನ ಶಿಖರಪ್ರದೇಶದಲ್ಲಿ ನಿಂತು ದಕ್ಷಿಣಕ್ಕೆ ಐದುಸಾವಿರ ಅಡಿಗಳ ಕೆಳಗೆ ಕಣ್ಣಾಡಿಸಿದಾಗ ಮಳೆಯಿಂದುಬ್ಬಿ ಭಯಂಕರವಾಗಿ ಹರಿಯುತ್ತಿರುವ ಶಾರದಾ (ಕಾಳೀ) ನದಿಯ ಅನುಪಮ ದೃಶ್ಯವು ಕಾಣುತ್ತಿದೆ. ಅದರ ಮಡಿಲಲ್ಲಿ ಬೃಹತ್ ವೃಕ್ಷ ಸಮೂಹ ಹೊಂದಿರುವ ೩-೪ ದ್ವೀಪಗಳಾದರೋ ಕೆಲವು ಹುಲ್ಲಿನ ಗದ್ದೆಗಳಂತೆ ತೋರುತ್ತಿದೆ!

ಆಶ್ರಮದ ನಿಯಮಿತ ಜೀವನವು ಶಾಂತ ರೀತಿಯಲ್ಲಿ ಮುನ್ನಡೆಯುತ್ತಿದೆ. ಅಂಥ ವೇಳೆಯಲ್ಲಿ ಸ್ವಾಮಿ ಗಣೇಶಾನಂದರು (ಅಮಿಯ ಮಹಾರಾಜ್) ತಮ್ಮ ದೇಹತ್ಯಾಗ ಮಾಡಿದ್ದಾರೆಂಬ ದುಃಖ ವಾರ್ತೆ ತಲುಪಿತು. ಇವರು ಕೆಲವು ಕಾಲದಿಂದ ರೋಗಪೀಡಿತರಾಗಿದ್ದರು. ಡೈಮಂಡ್ ಹಾರ್ಬರ್‌ನ ಹತ್ತಿರದ ಸರಿಷಾ ಗ್ರಾಮದ ಶ್ರೀರಾಮಕೃಷ್ಣ ಮಿಷನ್ ಆಶ್ರಮವು ಅವರ ದಣಿವರಿಯದ ಶ್ರಮದ ಫಲ. ಈ ಆಶ್ರಮವು ಬಾಲಕ ಬಾಲಕಿಯರಿಗಾಗಿ ವಿದ್ಯಾಲಯಗಳನ್ನು ಸ್ಥಾಪಿಸುವುದರ ಮೂಲಕ ಈ ಕಡೆಯ ಹಳ್ಳಿಗಳಲ್ಲಿ ಶಿಕ್ಷಣವನ್ನು ವಿಸ್ತರಿಸುವ ಒಂದು ಶಕ್ತಿಶಾಲಿ ಕೇಂದ್ರವಾಗಿ ಬೆಳೆದುನಿಂತಿದೆ. ಗಣೇಶಾನಂದರಂತಹ ಸರಳ ಸ್ವಭಾವದ ನಿಃಸ್ವಾರ್ಥ ಕರ್ಮಯೋಗಿಯು ಸಿಗುವುದು ಅತಿ ವಿರಳ. ಅವರಿಗೆ ಕೇವಲ ೪೦ ವರ್ಷಗಳು ಸಂದಿದ್ದವು. ಇಷ್ಟರಲ್ಲೇ ಅವರು ಅನೇಕ ಯುವಕರನ್ನು ಸ್ವಾಮೀಜಿಯ ಆದರ್ಶದೆಡೆಗೆ ಸೆಳೆದಿದ್ದರು. ಇವರ ಮರಣದಿಂದಾಗಿ ವಿರಜಾನಂದರು ಮರ್ಮವೇದನೆಯನ್ನನುಭವಿಸಿದರು. ಆಗಾಗ 'ಅಯ್ಯೋ! ಅಮಿಯನು ಹೊರಟುಹೋದ' ಎನ್ನುತ್ತಿದ್ದರು.

ಮಧ್ಯೆ ಮಧ್ಯೆ ಸ್ಮರಣೀಯವಾದಂತಹ ಪುಣ್ಯದಿನಗಳು ಆಶ್ರಮವಾಸಿಗಳಿಗೆ ಉತ್ತೇಜನವನ್ನು ನೀಡಿ ಹೋಗುತ್ತಿವೆ. ಝೂಲನ್ (ಉಯ್ಯಾಲೆ ಹಬ್ಬ), ಜನ್ಮಾಷ್ಟಮಿ, ದುರ್ಗಾಪೂಜೆ, ಕಾಳೀಪೂಜೆ, ರಾಸಪೂರ್ಣಿಮೆ ಇತ್ಯಾದಿ. ಇಂತಹ ದಿನಗಳಲ್ಲಿ ವಿರಜಾನಂದರು ಆಶ್ರಮದವರೆಲ್ಲರನ್ನೂ ಕೂಡಿಸಿಕೊಂಡು ಮುಖ್ಯವಾಗಿ ಸ್ಮರಣ ಮನನ ಹಾಗೂ ಭಜನೆಯಂತಹ ನಿರಾಡಂಬರ ಆಚರಣೆಯ ಮೂಲಕ ಈ ಮಹತ್ವಪೂರ್ಣ ಹಬ್ಬಗಳಿಗೆ ಶ್ರದ್ಧೆಯನ್ನು ತೋರುತ್ತಿದ್ದರು. ವಿಶೇಷ ದಿನಗಳು ಬಂದುಹೋಗುತ್ತಿದ್ದವು. ಆದರೆ ಆಶ್ರಮವಾಸಿಗಳಿಗೆ ಅವಿಸ್ಮರಣೀಯವಾದ ಒಂದು ಆನಂದಾನುಭವವನ್ನು ಬಿಟ್ಟುಹೋಗುತ್ತಿದ್ದವು.

* * *

''ಸಿವಿಲ್ ಸರ್ಜನ್ ಸಾಹೇಬ್ ಆ ರಹಾ ಹೈ'' (ಸಿವಿಲ್ ಸರ್ಜನರು ಬರುತ್ತಿದ್ದಾರೆ). ಪಹಾಡಿಗಳ ಬಾಯಿಯಲ್ಲಿ ಇದೇ ಮಾತು. ಆಸ್ಪತ್ರೆಗೆ ಬಂದುಹೋಗುವ ರೋಗಿಗಳೆಲ್ಲರೂ ಈ ಸುದ್ದಿಯನ್ನು ಡಾಕ್ಟರ್ ಸ್ವಾಮಿಯವರಿಂದ (ಶ್ಯಾಮಲಾತಾಲ್‌ನ ಸೇವಾಶ್ರಮದ ಸಂನ್ಯಾಸೀ ವೈದ್ಯರಾದ ಸ್ವಾಮಿ ಲೋಕೇಶಾನಂದರು) ಕೇಳಿ ತಿಳಿದುಕೊಂಡಿದ್ದಾರೆ. ಆಲ್ಮೋರದ ಸಿವಿಲ್ ಸರ್ಜನ್ ಸಾಹೇಬರಲ್ಲ, ವಿದೇಶದಿಂದ ಹಿಂತಿರುಗಿ ಬಂದಿರುವ ಕೊಲ್ಕತ್ತೆಯ 'ಬಹುತ್ ಬಡಾ ಡಾಕ್ಟರ್', 'ಬಡಾ ಮಹಾರಾಜ್ ಕಾ ಚೇಲಾ' (ಅರ್ಥಾತ್ ವಿರಜಾನಂದರ ಶಿಷ್ಯರು). ಈ ಡಾಕ್ಟರ್ ಆಶ್ರಮದಲ್ಲಿ ಕೆಲವು ದಿನ ಉಳಿದುಕೊಳ್ಳುವರು. ಯಾರು ಯಾರಿಗೆ ಕ್ಲಿಷ್ಟ ರೋಗಗಳಿವೆಯೋ, ಬಹುದಿನಗಳಿಂದ ಪೀಡಿತರೋ ಅವರೆಲ್ಲ ಸಿದ್ಧವಾಗಿರಲಿ, ಎಲ್ಲರನ್ನೂ ಅವರಿಗೆ ತೋರಿಸಿ ಒಳ್ಳೆಯ ಚಿಕಿತ್ಸೆ ಮಾಡಿಸುವೆ ಎಂದು ಲೋಕೇಶಾನಂದರು ಅವರಿಗೆಲ್ಲ ತಿಳಿಸಿದ್ದರು. ಆ ಡಾಕ್ಟರ್ ಯಾವಾಗ ಬರುವರೋ ಎಂದು ಪಹಾಡಿಗಳೆಲ್ಲ ನಿರೀಕ್ಷಿಸುತ್ತಿದ್ದರು.

ಈ ಡಾಕ್ಟರ್ ಸ್ವಾಮಿಗಳು ಆ ಕೌತುಕಮಯ ವೈದ್ಯರ ಬಗ್ಗೆ ತಿಳಿದಿದ್ದಾದರೂ ಹೇಗೆ? — ಸ್ವಯಂ ವಿರಜಾನಂದರಿಂದ. ಸಂಸಾರದ ಯಾವುದೋ ಒಂದು ಆಘಾತದಿಂದ ಸುಮಾರು ನಲುವತ್ತು ವರ್ಷದ, ಗುಣಶೀಲನಾದ ಈ ವೈದ್ಯನ ಮನಸ್ಸು ಮುರಿದಾಗ, ಶಾಂತಿಯನ್ನರಸಿಕೊಂಡು ಹರಿದ್ವಾರಕ್ಕೆ ಓಡಿಹೋಗಿದ್ದರು. ಶ್ರೀರಾಮಕೃಷ್ಣ ಮಿಷನ್ ಸಂಪರ್ಕಕ್ಕೆ ಬಂದು ತನ್ಮೂಲಕ ಶ್ರೀರಾಮಕೃಷ್ಣ-ವಿವೇಕಾನಂದರ ವಿಚಾರಧಾರೆಯಿಂದ ಪ್ರಭಾವಿತರಾಗಿ ಶ್ರೀರಾಮಕೃಷ್ಣ ಜಾಲದಲ್ಲಿ ಸಿಕ್ಕಿಬಿದ್ದರು. ಯಾರು ಅವರನ್ನು ಮಠಾಧ್ಯಕ್ಷರಾದ ವಿರಜಾನಂದರ ಹತ್ತಿರ ಕರೆದುಕೊಂಡು ಬಂದಿದ್ದರೋ ಬಹುಶಃ ಅವರೇ ಮಹಾರಾಜರಿಗೆ ಹೇಳಿದ್ದಿರಬೇಕು. ಈತನು ಯುರೋಪ್ ಮತ್ತಿತರ ದೇಶಗಳನ್ನು ಸುತ್ತಾಡಿ ಬಂದಿದ್ದಾರೆ ಎಂದು. ಅವರ ಉಪಾಧಿಗಳಾದರೋ ಎಷ್ಟೊಂದು!

ಹಾಫ್ ಪ್ಯಾಂಟ್ ಧರಿಸಿ, ಕುದುರೆಯನ್ನು ಹತ್ತಿ ಟನಕ್‌ಪುರದಿಂದ ೧೩ ಮೈಲಿಯ ಏರಿಳಿತದ ರಸ್ತೆಯಲ್ಲಿ ಪ್ರಯಾಣಿಸಿ ಡಾಕ್ಟರ್ ಸಾಹೇಬ್ ಸಂಜೆಗೆ ಮೊದಲೇ ಶ್ಯಾಮಲಾತಾಲನ್ನು ತಲುಪಿದ್ದರು. ವಿರಜಾನಂದರು ಅತಿಥಿಯನ್ನು ಸ್ವಾಗತಿಸಿ ಕರೆತರಲು ತಮ್ಮ ಸೇವಕ ಮಹಾರಾಜರನ್ನು ಮೊದಲೇ ಮೂರು ಮೈಲಿ ದೂರದ 'ಸುಖೀಢಂಗ್'ಗೆ ಬಿಸ್ಕತ್ ಮತ್ತು ಫ್ಲಾಸ್ಕನಲ್ಲಿ ಚಹಾ ಕೊಟ್ಟು ಕಳುಹಿಸಿದ್ದರು. ಆದರೆ ಅಷ್ಟು ದೂರ ಬೇಕಾಗಿ ಬರಲಿಲ್ಲ. ಆಶ್ರಮದಿಂದ ಒಂದೂವರೆ ಮೈಲಿ ದೂರದಲ್ಲಿಯೇ ಸೇವಕರಿಗೆ ಅತಿಥಿಯ ಭೇಟಿಯಾಯಿತು.

''ಕುದುರೆಯಿಂದ ಕೆಳಗಿಳಿದು ಸ್ವಲ್ಪ ಚಹಾ ಕುಡಿದುಬಿಡಿ, ಮಹಾರಾಜರು ನಿಮಗಾಗಿ ಚಹಾವನ್ನು ಕಳುಹಿಸಿದ್ದಾರೆ'' — ಎಂದರು ಸೇವಕ ಮಹಾರಾಜರು. ವಿನೀತ ನಗವೊಂದನ್ನು ಬೀರಿ ಕುದುರೆಯಿಂದಿಳಿದು ಸಂನ್ಯಾಸೀ ಸೇವಕರಿಗೆ ನಮಸ್ಕರಿಸಿ ಹೇಳುತ್ತಿದ್ದಾರೆ ''ಇಲ್ಲ, ಇಲ್ಲ, ಈಗ ನಾನೇನೂ ತಿನ್ನುವುದಿಲ್ಲ. ಶ್ರೀರಾಮಕೃಷ್ಣರ ದಯೆಯಿಂದ ಒಂದಿಷ್ಟೂ ತೊಂದರೆಯಾಗಲಿಲ್ಲ. ಆಶ್ರಮವನ್ನು ಸೇರಿ ಮೊದಲು ಮಹಾರಾಜರ ದರ್ಶನ ಮಾಡಿ ನಂತರ ತಿನ್ನುವೆ.'' ಸೇವಕ ಮಹಾರಾಜರು ಭಾವಿಸುತ್ತಿದ್ದಾರೆ, 'ಈತನದು ಮಧುರವಾದ ವ್ಯವಹಾರ. ಎಷ್ಟು ದೊಡ್ಡ ಡಾಕ್ಟರ್! ದೇಶವಿದೇಶ

ಸುತ್ತಿ ಬಂದಿದ್ದಾರೆ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಗ್ರೀಸ್, ರೋಮ್, ಬಹುಶಃ ಅಮೇರಿಕ, ಕೆನಡಾ ಎಷ್ಟೆಷ್ಟೋ ಸ್ಥಳವನ್ನೋ ಏನೋ! ಆದರೂ ಎಷ್ಟು ನಿರಭಿಮಾನಿ, ಎಷ್ಟು ಶ್ರದ್ಧಾವಂತ!'

ಮಾರನೇ ದಿನ ಆಶ್ರಮದಲ್ಲಿ ಚಹಾ ಕುಡಿದಮೇಲೆ ಸೇವಕ ಮಹಾರಾಜರು ಮಾತಿನ ನಡುವೆ ಅವರನ್ನು ಕೇಳಿದರು, ''ನೀವು ಇಟಲಿಗೇನಾದರೂ ಹೋಗಿದ್ದಿರೇನು?''

''ಇಟಲಿಗೆ?! ಇಲ್ಲವಲ್ಲ.''

''ಇಂಗ್ಲೆಂಡಿನಲ್ಲಿ ಎಷ್ಟು ವರ್ಷ ಇದ್ದಿರಿ?''

''ಇಂಗ್ಲೆಂಡ್! ಅಲ್ಲಿಗೆ ಹೋಗಿಯೇ ಇಲ್ಲವಲ್ಲ.''

''ಹಾಗಾದರೆ ನಿಮ್ಮ ಫಾರಿನ್ ಡಿಗ್ರಿ ಎಲ್ಲಿಯದು?''

''ಫಾರಿನ್ ಡಿಗ್ರಿ ಯಾವುದೂ ನನಗಿಲ್ಲವಲ್ಲ. ನಾನು ಕೊಲ್ಕತ್ತೆಯ M.B., D.T.M.''

ಹರಿ ಹರಿ! ಹಾಗಾದರೆ ಮಹಾರಾಜರಿಗೆ ಹಾಗೆನಿಸಿದ್ದಾದರೂ ಹೇಗೆ?

ಡಾಕ್ಟರ್ ನಗಲಾರಂಭಿಸಿದರು. ವಿರಜಾನಂದರಿಗೆ ಈ ವಿಷಯ ಬಹಿರಂಗ ಪಡಿಸಿದಾಗ ಅವರೂ ಸಹ ತುಂಬ ನಕ್ಕರು. ಏನಾದ ರಾಗಲಿ ಪಹಾಡಿ ರೋಗಿಗಳೇನೂ ನಿರಾಶರಾಗಲಿಲ್ಲ. 'ಸಿವಿಲ್ ಸರ್ಜನ್ ಸಾಹೇಬರು' ತಮ್ಮ ಎಲ್ಲ ವಿದ್ಯಾಬುದ್ಧಿಯನ್ನೆರೆದು, ಬಹು ಜಾಗ್ರತೆಯಿಂದ ಅವರ ಸೇವೆಗೈದರು. ಇದಾದ ನಂತ ರವೂ ಕೆಲವೊಂದು ಬಾರಿ ಈ ಡಾಕ್ಟರ್ ಶ್ಯಾಮಲಾತಾಲ್‌ಗೆ ಬಂದಿದ್ದರು. ಶ್ರೀಗುರುವಿನಿಂದ ಸ್ಥಾಪಿಸಲ್ಪಟ್ಟ ಈ ಸೇವಾಶ್ರಮ ದಲ್ಲಿ ಗಂಟೆಗಟ್ಟಲೆ ದರಿದ್ರ ರೋಗಿ ನಾರಾಯಣರ ಸೇವೆಯನ್ನು ಮಾಡಿದಾಗ ಅವರ ಮುಖದಲ್ಲಿ ಒಂದು ಸಂತೃಪ್ತಿಯ ಭಾವನೆ ತುಂಬಿಹೋಗುತ್ತಿತ್ತು!

ಬೆಟ್ಟದಾವರೆ, ಚೆಂಡು ಮತ್ತು ಕಾಸ್ಮಾಸ್ ಹೂಗಳ ಶೋಭೆ ಯನ್ನು ತನ್ನ ಸೆರಗಿನಲ್ಲಿ ಸುತ್ತಿಟ್ಟುಕೊಂಡು ಶ್ಯಾಮಲಾತಾಲ್‌ನ ಶರತ್ಕಾಲವು ವಿದಾಯ ಹೇಳಿತ್ತು. ಈಗ ಗಂಭೀರವಾದ ಹೇಮಂತ ಋತು. ಹಿಮಾಚ್ಛಾದಿತ ನಂದಾದೇವಿಯ ಶಿಖರದಲ್ಲಿ ಪ್ರಭಾತದ ಸೂರ್ಯಕಿರಣ ಮಿನುಗುತ್ತಿದೆ. ಪಹಾಡಿ ಬೇಸಾಯಗಾರರ ಗೋಧಿ ಬೆಳೆಯ ಕಾಲ. ಶಂಕರ ಮಹಾರಾಜರು ಅಮರನಾಥ ಯಾತ್ರೆ ಮುಗಿಸಿ ಹಿಂತಿರುಗಿದ್ದಾರೆ. ವಿರಜಾನಂದರು ತಮ್ಮ ಸೇವಕರೊಂದಿಗೆ ಶ್ಯಾಮಲಾತಾಲ್‌ನಿಂದ ಇಳಿದು ಬರಲು ತಯಾರಿ ನಡೆಸಿದ್ದಾರೆ. ಏತನ್ಮಧ್ಯೆ 'ಬೆರೇಲಿ' ಎಂಬಲ್ಲಿಂದ ಕೆಲವು ಭಕ್ತರು ಬಂದು ದೀಕ್ಷೆಯನ್ನು ಪಡೆದರು. ಇವರೊಂದಿಗೆ ಮಹಿಳೆ ಯೊಬ್ಬರೂ ಸಹ ಬರಲು ಅಪೇಕ್ಷಿಸಿ, ಮಹಾರಾಜರನ್ನು ಪತ್ರದ ಮೂಲಕ ಬಹಳ ಕೇಳಿಕೊಂಡಿದ್ದರು. ಅದಕ್ಕೆ ಮಹಿಳೆಯರು ಬಂದರೆ ಇಳಿದುಕೊಳ್ಳಲು ತಕ್ಕ ಏರ್ಪಾಡು ಅಲ್ಲಿಲ್ಲವೆಂದು ಅವರು ಬೇಡವೆಂದಿದ್ದರು. ಕೆಲವು ವರ್ಷಗಳ ನಂತರ ಆಕೆಯ ಮನೋವಾಂಛೆ ಡೆಹರಾಡೂನ್‌ನಲ್ಲಿ ಪೂರ್ಣಗೊಂಡಿತ್ತು.

ಸಾಧಾರಣವಾಗಿ ವಿರಜಾನಂದರು ಡಿಸೆಂಬರ್‌ನಲ್ಲಿ ಶ್ಯಾಮಲಾ ತಾಲ್‌ನಿಂದ ಹೊರಡುತ್ತಿದ್ದರು. ಈ ಬಾರಿ ನವೆಂಬರಿನ ಮೊದ ಲಲ್ಲೇ ಹೊರಟಿದ್ದಾರೆ. ಏಕೆಂದರೆ ಮಠ ತಲುಪುವ ಮೊದಲು ಅನೇಕ ಸ್ಥಳಗಳಿಗೆ ಭೇಟಿ ನೀಡಬೇಕಿತ್ತು. ಮೊದಲು ಬೃಂದಾವನ ದಲ್ಲಿ ಮೂರು ದಿನಗಳನ್ನು ಕಳೆದರು. ಅಲ್ಲಿ ೮೪ ವರ್ಷ ವಯ ಸ್ಸಿನ ಅವರ ತಾಯಿಯೂ ಜೀವಿಸುತ್ತಿದ್ದರು; ಅವರಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ, ಕಿವಿಯೂ ತನ್ನ ಗ್ರಹಣಶಕ್ತಿಯನ್ನು ಕಳೆದುಕೊಂಡಿತ್ತು. ಆದರೂ ೬೯ ವರ್ಷ ವಯಸ್ಸಿನ ತಮ್ಮ ಸಂನ್ಯಾಸಿ ಜ್ಯೇಷ್ಠ ಪುತ್ರನನ್ನು ಕಂಡು ಆಕೆಯ ಎರಡೂ ಕಣ್ಣು ಗಳಿಂದ ಆನಂದ ಬಾಷ್ಪಗಳು ಉದುರಿದವು.[೧]

ಬೃಂದಾವನದಿಂದ ಮಹಾರಾಜರು ನವದೆಹಲಿಗೆ ಬಂದು ಮೂರು ದಿನಗಳಿದ್ದರು. ಎರಡು ವರ್ಷಗಳ ಹಿಂದೆಯೂ ಬಂದಿ ದ್ದರು, ಅಂದಿಗಿಂತ ಈಗ ಇಲ್ಲಿಯ ಆಶ್ರಮವು ಬಹಳಷ್ಟು ಬೆಳೆದು ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತ್ತು. ಭಕ್ತರ-ಮಿತ್ರರ ಸಂಖ್ಯೆಯು ಹೆಚ್ಚುತ್ತಲಿತ್ತು. ದೆಹಲಿಯಿಂದಷ್ಟೇ ಅಲ್ಲದೆ ಮೊರಾದಾಬಾದ್, ಬೆರೇಲಿ ಮುಂತಾದೆಡೆಗಳಿಂದಲೂ ದೀಕ್ಷಾರ್ಥಿ ಗಳು ಬಂದಿದ್ದರು.

ದೆಹಲಿಯಿಂದ ಡೆಹರಾಡೂನಿಗೆ ಅಲ್ಲಿಯ ವೈದ್ಯರೂ ಶ್ರೀಮಾತೆ ಯವರ ಶಿಷ್ಯರೂ ಆದ ಕ್ಯಾಪ್ಟನ್ ಯತೀಂದ್ರ ಮೋಹನ್ ಮಿತ್ರರ ಸಾದರ ಆಹ್ವಾನದ ಮೇರೆಗೆ ಮಹಾರಾಜರು ಅವರ ಮನೆಯಲ್ಲಿ ಕೆಲವು ದಿನ ತಂಗುವುದೆಂದು ತೀರ್ಮಾನಿಸಿದ್ದರು. ಅವರ ಯಕೃತ್ ಮತ್ತು ಹೃದಯದ ದುರ್ಬಲತೆ, ಅದ ರೊಂದಿಗೆ ಬರುವ ಜ್ವರದ ಬಗ್ಗೆ ಕೇಳಿದಾಗಿನಿಂದ ಡಾಕ್ಟರ್ ಬಾಬು ಗಳು ಮಹಾರಾಜರಿಗೆ ಕೆಲವು ದಿನ ಹವಾ ಬದಲಾವಣೆಗಾಗಿ ಡೆಹರಾಡೂನಿಗೆ ಬಂದು ಇರಬೇಕೆಂದು ಪತ್ರದ ಮೂಲಕ ಪದೇ ಪದೇ ವಿನಂತಿಸಿಕೊಂಡಿದ್ದರು. ಇಲ್ಲಿಯ ಆರೋಗ್ಯಕರ ಹವೆಯಿಂ ದಾಗಿ ಹಾಗೂ ತಮ್ಮ ಮೇಲ್ವಿಚಾರಣೆಯಲ್ಲಿ, ತಕ್ಕ ಔಷಧಪಥ್ಯಗಳ ಸೇವನೆಯಿಂದ ಮಹಾರಾಜರು ಚೇತರಿಸಿಕೊಳ್ಳುವರೆಂಬ ದೃಢ ವಿಶ್ವಾಸ ಡಾಕ್ಟರರಿಗಿತ್ತು.

ಡಾಕ್ಟರರ ವಿಶ್ವಾಸ ಹುರುಳಿಲ್ಲದ್ದೇನಲ್ಲ. ಮೂರು ವಾರ ಇಲ್ಲಿ ತಂಗಿ ವಿರಜಾನಂದರು ಆಶ್ಚರ್ಯಕರವಾದ ರೀತಿಯಲ್ಲಿ ಚೇತ ರಿಸಿಕೊಂಡರು. ಇದಾದ ನಂತರ ಮಹಾರಾಜರು ಇನ್ನೂ ಕೆಲವು ಬಾರಿ ಇಲ್ಲಿಗೆ ಭೇಟಿಯಿತ್ತಿದ್ದರು. ಕ್ಯಾಪ್ಟನ್ ಮಿತ್ರ ಮತ್ತವರ ಸಾಧ್ವೀ ಸಹಧರ್ಮಿಣಿ (ಈಕೆ ವಿರಜಾನಂದರ ಶಿಷ್ಯೆ)ಯವರು ಮಹಾರಾಜರಿಗೆ ಅತ್ಯಂತ ನಿಷ್ಠೆಯಿಂದ ಸೇವೆ ಮಾಡುತ್ತಿದ್ದುದು ನಿಜಕ್ಕೂ ವಿಸ್ಮಯಕರ. ಡೆಹರಾಡೂನಿನ ನಂ. ೮, ಮುನ್ಸಿಪಾಲಿಟಿ ರೋಡಿನಲ್ಲಿರುವ ಈ ಡಾಕ್ಟರರ ಮನೆಯಾದ 'ಶ್ರೀರಂಗಂ' ಅದೆಷ್ಟು ಪವಿತ್ರ ಸ್ಮೃತಿಗಳಿಂದ ಕೂಡಿದೆ !

---

[೧] ವಿರಜಾನಂದರೊಡನೆ ಈಕೆಯದು ಇದೇ ಕೊನೆಯ ಭೇಟಿ. ಇವರು ಎಂಟು ತಿಂಗಳ ನಂತರ ತಮ್ಮ ದೇಹತ್ಯಾಗ ಮಾಡಿದರು (೧೯೪೨ರ ಜೂನ್ ೭ರಂದು). ಆಗ ಮಹಾರಾಜರು ಶ್ಯಾಮಲಾತಾಲ್‌ನಲ್ಲಿದ್ದರು.

ಮಹಾರಾಜರು ಇಲ್ಲಿಗೆ ಬಂದಾಗಲೆಲ್ಲ ಸಾಧು–ಭಕ್ತರ ಸಮಾಗಮದಿಂದ ಮನೆಯಲ್ಲಿ ಸಡಗರದ ವಾತಾವರಣವಿರುತ್ತಿತ್ತು. ಡಾಕ್ಟರರು ಆಗ ತಮ್ಮ ಮನೆಯನ್ನು ಆನಂದದಿಂದ 'ಶ್ರೀರಂಗಂ ಆಶ್ರಮ' ಎನ್ನುತ್ತಿದ್ದರು. ಡೆಹರಾಡೂನಿನಿಂದ ನಾಲ್ಕು ಮೈಲಿ ಉತ್ತರಕ್ಕಿರುವ ಕಿಷನ್‌ಪುರದ 'ಶ್ರೀರಾಮಕೃಷ್ಣ ಸಾಧನ ಕುಟೀರ'ದಿಂದ, ಕಂಖಲ್ ಸೇವಾಶ್ರಮದಿಂದ ಅಲ್ಲದೆ ಹೃಷೀಕೇಶದಿಂದಲೂ ಸಹ ಸಾಧು–ಬ್ರಹ್ಮಚಾರಿಗಳು ಮಠಾಧ್ಯಕ್ಷರನ್ನು ಕಾಣಲು ಬರುತ್ತಿದ್ದರು. ಸುತ್ತಮುತ್ತಲಿನ ಭಕ್ತರೂ ಸಹ ಅವರ ದರ್ಶನಕ್ಕೆಂದು ಬರುತ್ತಿದ್ದರು. ಮಹಾರಾಜರು ಆಗಾಗ ಕಿಷನ್‌ಪುರದ ಆಶ್ರಮಕ್ಕೆ ಹೋಗುತ್ತಿದ್ದರು. ಒಮ್ಮೆ ಅಲ್ಲಿ ಅನೇಕರಿಗೆ ಮಂತ್ರದೀಕ್ಷೆಯನ್ನು ನೀಡಿದ್ದರು. ಶ್ರೀರಂಗಂನಲ್ಲಿಯೂ ಸಹ ಬೇರೆ ಬೇರೆ ಸಮಯದಲ್ಲಿ ಭಕ್ತರು ಬಂದು ಮಂತ್ರದೀಕ್ಷೆಯನ್ನೂ, ಸಾಧನೋಪದೇಶವನ್ನೂ ಪಡೆಯುತ್ತಿದ್ದರು. ಹಬ್ಬಹರಿದಿನಗಳಲ್ಲಿ ವಿರಜಾನಂದರ ಮಾರ್ಗದರ್ಶನದಲ್ಲಿ ಬಹಳಷ್ಟು ಪೂಜೆ ಪುನಸ್ಕಾರಗಳೂ, ಭಜನೆ–ಉತ್ಸವಗಳೂ, ವಿಚಾರಕೂಟಗಳೂ ನಡೆಯುತ್ತಿದ್ದವು. ಒಮ್ಮೆ ಶ್ರೀಮಾತೆಯವರ ಜನ್ಮತಿಥಿಯಂದು ಮಹಾರಾಜರು ಇಲ್ಲಿಯೇ ಇದ್ದರು. ಆ ವಿಶೇಷ ದಿನದ ಅಂಗವಾಗಿ ಷೋಡಶೋಪಚಾರ ಪೂಜೆಯನ್ನೂ ವಿಶೇಷ ನೈವೇದ್ಯದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಪೂಜೆಯನ್ನು ಮಹಾರಾಜರ ಸೇವಕರಲ್ಲೊಬ್ಬರಾದ ಬ್ರಾಹ್ಮಣ ಬ್ರಹ್ಮಚಾರಿಗಳು ಮಾಡಿದ್ದರು; ಸ್ವಾಮಿ ಪ್ರಕಾಶಾನಂದರು (ಸುರೇನ್ ಮಹಾರಾಜ್) ತಂತ್ರಧಾರಕರಾಗಿದ್ದರು. ಚಂಡೀಪಾಠವನ್ನು ಸ್ವಾಮಿ ಜಗದಾನಂದರು ಮಾಡಿದ್ದರು. ಕಂಖಲ್ ಮತ್ತು ಕಿಷನ್‌ಪುರದ ಆಶ್ರಮಗಳಿಂದಲೂ ಬಹಳ ಸಾಧುಗಳು ನೆರೆದಿದ್ದರು. ಹೀಗೆ ಉತ್ಸವವು ಬಹಳ ಚೆನ್ನಾಗಿ ಜರುಗಿತ್ತು.

ಮತ್ತೊಂದು ಬೇಸಿಗೆಯಲ್ಲಿ ಚಿಕಿತ್ಸಕರ ಆಣತಿಯಂತೆ ವಿರಜಾನಂದರು ಡೆಹರಾಡೂನಿನಲ್ಲೇ ನಿಲ್ಲಬೇಕಾಯಿತು. ಜ್ಯೇಷ್ಠ ಮಾಸದ ಪೂರ್ಣಿಮೆಯಲ್ಲಿ ಇವರ ಜನ್ಮದಿನವನ್ನು 'ಶ್ರೀರಂಗಂ' ನಲ್ಲೇ ಆಚರಿಸಲಾಗಿತ್ತು. ಈ ಸಂದರ್ಭದಲ್ಲಿ ಕೊಲ್ಕತ್ತಾದಿಂದಲೂ ಅನೇಕ ಮಂದಿ ಭಕ್ತರು ಬಂದಿದ್ದರು. ಡೆಹರಾಡೂನಿಗೆ ಬಂದಾಗಲೆಲ್ಲ ಮಹಾರಾಜರ ಸ್ವಾಸ್ಥ್ಯವು ತುಂಬ ಚೆನ್ನಾಗಿರುತ್ತಿತ್ತು. ಶ್ರೀರಂಗಂನ ಉದಾರ ಆತಿಥ್ಯದಲ್ಲಿ ಅವರು ಸ್ವಚ್ಛಂದವಾಗಿರುತ್ತಿದ್ದರು.

ಡಿಸೆಂಬರ್ ೩ರಂದು (೧೯೪೧) ಡೆಹರಾಡೂನಿನಿಂದ ಹೊರಟು ಮಹಾರಾಜರು ಮಾರನೇ ದಿನ ಕಾನ್ಪುರವನ್ನು ಸೇರಿದರು. ಡೆಹರಾಡೂನನ್ನು ಬಿಡುವ ಮೊದಲು ಮಹಾರಾಜರ ಉಪಸ್ಥಿತಿಯಲ್ಲಿ ಕಿಷನ್‌ಪುರದ ಆಶ್ರಮದಲ್ಲಿ ಭಕ್ತ ಸಮ್ಮೇಳನವೊಂದು ನಡೆಯಿತು. ಮತ್ತೊಂದು ದಿನ ಮಹಾರಾಜರು ಡೆಹರಾಡೂನಿನ ಉದಾಸೀ ಸಂಪ್ರದಾಯದ ಗುರುಗಳಾದ ಲಛಮನದಾಸ್ ಮಹಂತರೊಡನೆ ಭೇಟಿಯಾಗಿ ಬಂದರು. ಆ ಮಹಂತರು ಇವರನ್ನು ಅತ್ಯಂತ ಆದರದಿಂದ ಬರಮಾಡಿ ಕೊಂಡು, ಹಿಂತಿರುಗುವಾಗ ದೊಡ್ಡ ಬುಟ್ಟಿಯಲ್ಲಿ ಹಣ್ಣುಹಂಪಲುಗಳನ್ನು, ಪಿಸ್ತಾ ಬಾದಾಮಿಗಳನ್ನು ಕಳುಹಿಸಿದ್ದರು.

ಕಾನ್ಪುರದ ಆಶ್ರಮವು ಸ್ವಾಮಿ ನಿತ್ಯಾನಂದರ (ನೇಪಾಲ್ ಮಹಾರಾಜರು) ಬಹು ಪ್ರಯತ್ನದ ಫಲ. ಇವರು ೧೯೧೧ರಲ್ಲಿ ಕಾಶಿಯ ಸೇವಾಶ್ರಮವನ್ನು ಸೇರಿದ್ದರು. ಕಾನ್ಪುರದಲ್ಲಿ ಕೆಲವು ಯುವಕರನ್ನು ಸಂಘಟಿಸಿ ವ್ಯಾಯಾಮಾದಿಗಳೇ ಅಲ್ಲದೆ ಶ್ರೀರಾಮಕೃಷ್ಣ–ವಿವೇಕಾನಂದರ ಆದರ್ಶಗಳ ಚರ್ಚೆಯನ್ನೂ ಸಹ ನಡೆಸುತ್ತಿದ್ದರು. ನಂತರದಲ್ಲಿ ಒಂದು ಸಮಿತಿಯು ಸ್ಥಾಪಿಸಲ್ಪಟ್ಟು, ಬಡರೋಗಿಗಳ ಚಿಕಿತ್ಸೆ, ಉಚಿತ ವಿದ್ಯಾಲಯ ಮುಂತಾದ ಸೇವಾಕಾರ್ಯಗಳು ನಿಷ್ಕಾಮಕರ್ಮದ ರೂಪದಲ್ಲಿ ಒಂದೊಂದಾಗಿ ಪ್ರಕಟಗೊಳ್ಳತೊಡಗಿದವು. ಇಂದಿಗೆ ಶ್ರೀರಾಮಕೃಷ್ಣಾಶ್ರಮವು ಕಾನ್ಪುರದಲ್ಲೇ ಅತ್ಯಂತ ಹಿರಿದಾದ ಜನೋಪಕಾರಿ ಸಂಸ್ಥೆಯಾಗಿದೆ. ಪ್ರತಿಯೊಂದು ವಿಭಾಗವೂ ಸಹ ಅತ್ಯಂತ ದಕ್ಷತೆಯಿಂದ ನಡೆಯುತ್ತಿವೆ. ಆಶ್ರಮದ ಮಂದಿರದಲ್ಲಿ ಸಂಧ್ಯಾರತಿಯ ಸಮಯದಲ್ಲಿ ಭಕ್ತರು ಬಹಳ ಸಂಖ್ಯೆಯಲ್ಲಿ ನೆರೆಯುತ್ತಾರೆ. ಈ ಆಶ್ರಮವು ತ್ರಿಕರಣಗಳಿಗೂ ತಕ್ಕುದಾದ ಆಹಾರವನ್ನಿತ್ತು ಕಾನ್ಪುರವಾಸಿಗಳ ಹೃದಯವನ್ನು ಗೆದ್ದಿದೆ.[೨] ಈ ಆಶ್ರಮವಿರುವ ಸ್ಥಳಕ್ಕೆ ಈಗ 'ರಾಮಕೃಷ್ಣ ನಗರ' ಎಂದೇ ನಾಮಕರಣವಾಗಿದೆ.

ವಿರಜಾನಂದರು ಕಾನ್ಪುರ ಆಶ್ರಮದ ಕೆಲಸ ಕಾರ್ಯಗಳನ್ನು ವೀಕ್ಷಿಸಿ ತುಂಬ ಸಂತುಷ್ಟಗೊಂಡರು. ಇಲ್ಲಿ ದೀಕ್ಷಾರ್ಥಿಗಳ ಮನೋವಾಂಛೆಯೂ ಪೂರ್ಣಗೊಂಡಿತು. ವಿರಜಾನಂದರು ಇಲ್ಲಿ ಎರಡು ದಿನಗಳಿಗಿಂತ ಹೆಚ್ಚು ತಂಗಲಾಗಲಿಲ್ಲ.

ಡಿಸೆಂಬರ್ ೫ರಂದು (೧೯೪೧) ಕಾನ್ಪುರದಿಂದ ಅಲಹಾಬಾದಿಗೆ ಬಂದರು. ಸ್ವಾಮಿ ವಿಜ್ಞಾನಾನಂದರ ಮಹಾಸಮಾಧಿಯ ನಂತರ ಆಶ್ರಮ ನೋಡಿಕೊಳ್ಳುವ ಜವಾಬ್ದಾರಿಯನ್ನು ಸ್ವಾಮಿ ರಾಘವಾನಂದರಿಗೆ (ಸೀತಾಪತಿ ಮಹಾರಾಜ್) ಅರ್ಪಿಸಲಾಗಿತ್ತು. ಇವರು ಮಾಯಾವತಿ ಮತ್ತು ಶ್ಯಾಮಲಾತಾಲ್‌ನ ಪ್ರಾರಂಭದ ದಿನಗಳಲ್ಲಿ ಮಹಾರಾಜರೊಂದಿಗೆ ಕೆಲಸ ಮಾಡಿದ್ದರು. ಮಹಾರಾಜರ ಬಗ್ಗೆ ಅತ್ಯಂತ ಶ್ರದ್ಧೆ ಹಾಗೂ ಪ್ರೀತಿಯಿತ್ತು. ಹೀಗಾಗಿ ಮಹಾರಾಜರನ್ನೂ, ಅವರ ಸೇವಕರನ್ನೂ ಅತ್ಯಂತ ಗೌರವದಿಂದ ಸ್ವಾಗತಿಸಿದರು. ಅಲಹಾಬಾದಿನ ಹಳೆಯ ಭಕ್ತರು ಮಾರನೇ ದಿನ ಮಹಾರಾಜರನ್ನು ಭೇಟಿಯಾಗಲು ಬಂದರು. ಕೆಲವರ ದೀಕ್ಷೆಯೂ ನಡೆಯಿತು. ತ್ರಿವೇಣೀ ಸಂಗಮದಲ್ಲಿ ಅರ್ಧಕುಂಭಮೇಳದ ಆಯೋಜನೆಯಾಗಿತ್ತು. ಸೀತಾಪತಿ ಮಹಾರಾಜರು ವಿರಜಾನಂದರನ್ನು ಸಂಜೆ ಆ ಸ್ಥಳಕ್ಕೆ ಮೋಟಾರಿನಲ್ಲಿ ಕರೆದೊಯ್ದು ಸುತ್ತಾಡಿಸಿಕೊಂಡು ಬಂದರು.

*(ಮುಂದುವರಿಯುವುದು)*

---

೨ ವಿರಜಾನಂದರ ಕಾನ್ಪುರ ಭೇಟಿಯ ಒಂದೂವರೆ ವರ್ಷಗಳ ನಂತರ ಸ್ವಾಮಿ ನಿತ್ಯಾನಂದರು ಕಂಖಲ್ ಸೇವಾಶ್ರಮದಲ್ಲಿ ಪಾರ್ಶ್ವವಾಯುವಿನಿಂದಾಗಿ ಹಠಾತ್ತಾಗಿ ದೇಹತ್ಯಾಗ ಮಾಡಿದರು. ಆಗ ಅವರಿಗೆ ೫೦ ವರ್ಷ ವಯಸ್ಸಾಗಿತ್ತು. ಈ ವಿಷಯ ಕೇಳಿದ ವಿರಜಾನಂದರು ತುಂಬ ದುಃಖಪಟ್ಟರು.